
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್ 2019
ಬೆಲೆ ರೂ. 1



## ಹರಿದು ಬಂದ ಗಾನಸುಧೆ



ನೂತನ ಸಂಸದರು ಮತ್ತು ಸಚಿವರಿಗೆ ಅಭಿನಂದನೆ




ಖ್ಯಾತ ಹಿಂದೂಸ್ತಾನಿ ಗಾಯಕ ಬಾಲಚಂದ್ರ ನಾಕೋಡ್ ಅವರನ್ನು ದಿನಾಂಕ 14.07.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಸನ್ಮಾನ್ಯ ಪ್ರಹ್ಲಾದ್ ಜೋಷಿ ಅವರು ಅಭಿನಂದಿಸಿದರು.




ಗಾಯಕಿ ಅರ್ಪಿತಾ ಜೋಷಿ ಅವರನ್ನು ದಿನಾಂಕ 14.07.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಸಂತೋಷ್ ಕುಮಾರ್ ಉಪಾಧ್ಯಾಯ
ಎಸ್. ಕುಮಾರ್
ಚಂದ್ರಶೇಖರ ಜೋಳದರಾಶಿ

ಸಂಪುಟ 29
ಸಂಚಿಕೆ 11
ಆಗಸ್ಟ್ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಮುಖಪುಟ ಚಿತ್ರ
ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಕಲಾವಿದ ಬಾಲಚಂದ್ರ ನಾಕೋಡ್

# ಸಂಪಾದಕೀಯ

## ಚೆಂಬೆಳಕಿನ ಕವಿಗೆ ನೃಪತುಂಗ ಗೌರವ

ಕನ್ನಡದ ಹಿರಿಯ ಕವಿ ನಾಡೋಜ ಚೆನ್ನವೀರ ಕಣವಿ ಅವರಿಗೆ ಈ ಬಾರಿ ಪ್ರತಿಷ್ಠಿತ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಯ ಗೌರವ ಲಭಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ನೀಡುವ ಏಳು ಲಕ್ಷ ಒಂದು ರೂಪಾಯಿ ನಗದು ಪುರಸ್ಕಾರ ಒಳಗೊಂಡ ಈ ಪ್ರಶಸ್ತಿಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸ್ಥಾಪಿಸಿದೆ.

ಚೆಂಬೆಳಕಿನ ಕವಿ ಎಂದೇ ಕರೆಯುವ ಚೆನ್ನವೀರ ಕಣವಿ ಅವರು ಬರೆದ 'ಹೂವು ಹೊರಳುವುವು ಸೂರ್ಯನ ಕಡೆಗೆ, ನಮ್ಮ ದಾರಿ ಬರಿ ಚಂದ್ರನವರೆಗೆ' ಮೊದಲಾದ ಕವಿತೆಗಳು ಸಾಹಿತ್ಯಪ್ರಿಯರನ್ನು ಮುದಗೊಳಿಸಿವೆ. 'ವಿಶ್ವ ವಿನೂತನ ವಿದ್ಯಾಚೇತನ, ಸರ್ವ ಹೃದಯ ಸಂಸ್ಕಾರಿ, ಜಯ ಭಾರತಿ' ಎಂಬ ಅವರ ನಾಡಗೀತೆ ನಾಡಿನಾದ್ಯಂತ ಜನಪ್ರಿಯ.

ಕಣವಿ ಅವರ 'ಜೀವಧ್ವನಿ' ಕವನ ಸಂಕಲನಕ್ಕೆ 1981ರಲ್ಲೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. ಎಂಭತ್ತೆರಡು ಪುಟಗಳ ತೆಳುವಾದ ಈ ಕೃತಿ ಗಾತ್ರದಲ್ಲಿ ಕಿರಿದು. ಆದರೆ ಅದು ಕವಿ ತನ್ನ ಸುತ್ತಲಿನ ಪರಿಸರಕ್ಕೆ ಪ್ರೀತಿ, ಕರುಣೆ ಮತ್ತು ವಿಡಂಬನೆಗಳಿಂದ ಸ್ಪಂದಿಸಿದ ಮಹತ್ವದ ಕಾವ್ಯಸೃಷ್ಟಿಯಾಗಿ ಅಭಿವ್ಯಕ್ತಿಗೊಂಡಿತ್ತು.

ಕಣವಿ ಅವರ ಕಾವ್ಯಜೀವನ ಮೂಲತಃ ಪರಿಸರ ಸಂವೇದಿಯಾಗಿದೆ ಮತ್ತು ಅದು ಚಲನಶೀಲವಾಗಿ ತನ್ನ ಜೀವಂತಗತಿಯನ್ನು ಪ್ರಕಟಿಸಿಕೊಂಡಿದೆ ಎಂದು ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಅಭಿಪ್ರಾಯಪಟ್ಟಿದ್ದರು. ಅದರಂತೆ ತನ್ನ ಬಾಲ್ಯ ಕಾಲದಿಂದಲೂ ಕುತೂಹಲ ಮೂಡಿಸಿದ ಕಿರುಜೀವ ಇರುವೆಯ ಕುರಿತೂ ಕವಿ ಕಣವಿ ಅವರು ಕವಿತೆಯನ್ನು ಬರೆದಿದ್ದಾರೆ. ಅದರ ಕೆಲವು ಸಾಲುಗಳು ಇಂತಿವೆ.

ಗುದ್ದಿನೊಳಗಿಂದ ಪುದು ಪುದು ಎದ್ದು
ಸ್ಪರ್ಶಾಂಗಗಳ ಗಾಳಿಗಾಡಿಸಿ
ಮೂಸಿ, ಗುರುತಿಸಿ, ಅಡ್ಡಿ–
ಆತಂಕಗಳ ದಾಟಿರುವೆ,
ಎಲ್ಲ ತುಳಿದಾಟದಲಿ, ನಿನ್ನದೇ
ಹಾದಿಯನು ಹಿಡಿದು ಹೊರಟಿರುವೆ. . .

ಇದು 'ಇರುವೆ ಕುರಿತು ಕಣವಿ ಹೇಳುವ ಬಗೆ. ಈ ಸಾಲುಗಳು ಜಿ.ಎಸ್.ಎಸ್. ಅವರ ಮಾತನ್ನು ಪುಷ್ಟೀಕರಿಸುತ್ತದೆ.



ಕವಿ ಚೆನ್ನವೀರ ಕಣವಿ ಅವರು ಕೆಲ ವರ್ಷಗಳ ಹಿಂದೆ ದೆಹಲಿ ಕರ್ನಾಟಕ ಸಂಘಕ್ಕೆ ಸದ್ದಿಲ್ಲದೆ ಭೇಟಿ ನೀಡಿದ್ದರು. ಇಲ್ಲಿನ ಸಾಹಿತ್ಯಾಸಕ್ತರೊಂದಿಗೆ ಕೆಲ ಕಾಲ ಸಂವಾದ ನಡೆಸಿದ್ದರು. ಇದೀಗ ನೃಪತುಂಗ ಪ್ರಶಸ್ತಿಯ ಗೌರವಕ್ಕೆ ಭಾಜನರಾದ 'ವಿಶ್ವ ಭಾರತಿಗೆ ಕನ್ನಡದಾರತಿ' ಎತ್ತಿದ ಕವಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

*ಡಾ. ಅವನೀಂದ್ರನಾಥ್ ರಾವ್*


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 11
ಆಗಸ್ಟ್ 2019, ಬೆಲೆ ರೂ. 1

## ನಮ್ಮನಮ್ಮೊಳಗೆ

# ಕನ್ನಡ ಕಲಿಕೆಯ ಕುರಿತಾಗಿ

ಹೊರನಾಡ ಕನ್ನಡಿಗರಲ್ಲಿ, ಅದರಲ್ಲೂ ದೆಹಲಿಯ ರಾಷ್ಟ್ರೀಯ ರಾಜಧಾನಿ ಭಾಗದ ಕನ್ನಡಿಗರಲ್ಲಿ, ಕಳೆದ ಕೆಲವಾರು ವರ್ಷಗಳಿಂದ ತಮ್ಮ ಮಕ್ಕಳಿಗೆ ಕನ್ನಡವನ್ನು ಕಲಿಸುವುದರ ಬಗ್ಗೆ ಉತ್ಸಾಹದ ಚಿಲುಮೆ ಪುಟಿಯುತ್ತಿರುವುದು ಸಂತಸದ ವಿಷಯ. ದೆಹಲಿ ಕರ್ನಾಟಕ ಸಂಘದ ಅಡಿಯಲ್ಲಿ 2011 ರಲ್ಲಿ ಮೊದಲು ಪ್ರಾರಂಭವಾದ ಈ ಪ್ರಯತ್ನ ದೆಹಲಿಯ ಇತರ ಭಾಗಗಳಿಗೆ ನಿಧಾನವಾಗಿಯಾದರೂ, ಖಚಿತವಾಗಿ ಪಸರಿಸುತ್ತಿರುವುದು ಇನ್ನೂ ಸಂತಸದ ವಿಷಯ. ಆಗ ದೆಹಲಿ ಕರ್ನಾಟಕ ಸಂಘದ ಆವರಣದಿಂದ ಸಂಭ್ರಮದಿಂದ ಪ್ರಾರಂಭವಾದ ಈ ಕನ್ನಡ ಕಲಿಕಾ ಕೇಂದ್ರ ಕೆಲ ಕಾಲ ತುಂಬಾ ಉತ್ಸಾಹದಿಂದ ಮಕ್ಕಳನ್ನು ಪ್ರತಿ ಭಾನುವಾರವೂ ಸೇರಿಸಿ ಕನ್ನಡದ ಅಂಕಲಿಪಿಯ ಪರಿಚಯದೊಂದಿಗೆ, ಕನ್ನಡವನ್ನು ಸುಲಲಿತವಾಗಿ ಮಾತನಾಡುವತ್ತ ಅದ್ಭುತವಾದ ಕೆಲಸವನ್ನು ಮಾಡಿತು. ಕನ್ನಡ ಪ್ರಾಧಿಕಾರವೂ ಸಹ ಈ ಕಲಿಕಾ ಕೇಂದ್ರಕ್ಕೆ ಹಣಕಾಸಿನ ನೆರವು ನೀಡಿದ್ದು ಉಲ್ಲೇಖನಿಯ. ಈ ಕಾಲದಲ್ಲೇ ದೆಹಲಿಯ ಪೂರ್ವ ಭಾಗದ ಮಯೂರ ವಿಹಾರದಲ್ಲಿ ಕೆಲಕಾಲ ಕನ್ನಡ ಕಲಿಕಾ ಕೇಂದ್ರವೊಂದು ಕೆಲಕಾಲ ಕಾರ್ಯ ನಿರ್ವಹಿಸಿದ್ದನ್ನು ಇಲ್ಲಿ ನೆನೆಸಿಕೊಳ್ಳಬೇಕು. ಈ ಕಲಿಕಾ ಕೇಂದ್ರಗಳು ಕೆಲಕಾಲದ ನಂತರ ಹಲವಾರು ಕಾರಣಗಳಿಂದಾಗಿ, ಮುಖ್ಯವಾಗಿ ನಿರಂತರವಾಗಿ ಕಲಿಸುವ ಅಧ್ಯಾಪಕರ ಕೊರತೆಯಿಂದಾಗಿ, ಮಕ್ಕಳ ಶಾಲಾ ಚಟುವಟಿಕೆಗಳ ಕಾರಣದಿಂದಾಗಿ, ಕ್ರಮೇಣವಾಗಿ ನಿಂತು ಹೋದದ್ದು ನಿರಾಶಜನಕವಾದರೂ, ಈ ಕಲಿಕಾ ಕೇಂದ್ರಗಳ ಮಾಡೆಲ್‌ನ್ನು ಗುರುಗ್ರಾಮ ಕನ್ನಡ ಸಂಘದವರು, ಅಲ್ಲಿಂದ ಮುಂದೆ ಜಯಪುರದ ರಸ್ತೆಯಲ್ಲಿರುವ ಭಿವಾಡಿಯಲ್ಲೂ (ಈ ಪುಟ್ಟ ಸುಂದರ ರಾಜಸ್ತಾನದಲ್ಲಿರುವ ಕೈಗಾರಿಕಾ ಕೇಂದ್ರ) ಸಹ ಅಲ್ಲಿನ ಕನ್ನಡ ಸಂಘದವರು ಇತ್ತೀಚೆಗೆ ವಿದ್ಯುಕ್ತವಾಗಿ ಪ್ರಾರಂಭಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಜೆ.ಎನ್.ಯು.ವಿನಲ್ಲಿ ಕರ್ನಾಟಕ ಸರಕಾರದ ನೆರವಿನೊಂದಿಗೆ ಪ್ರಾರಂಭವಾದ ಕನ್ನಡ ಪೀಠದಲ್ಲಿ ಪ್ರಾಧ್ಯಾಪಕ ಮತ್ತು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ್ಯರಾದ ಪ್ರೊ. ಪುರುಷೋತ್ತಮ ಬಿಳಿಮಲೆಯವರು ಪೀಠದ ಇತರ ಘನ ಕಾರ್ಯಕ್ರಮಗಳ ಜೊತೆಗೆ ಪ್ರಾಥಮಿಕ ಕನ್ನಡ ಕಲಿಕೆಗೆ ಒತ್ತುಕೊಟ್ಟು ಕನ್ನಡೇತರರಿಗೆ (ಮತ್ತು ಜೆ ಎನ್ ಯು ದಲ್ಲಿರುವ ಹಲವು ದೇಶಗಳ ವಿದೇಶಿ ನಾಗರಿಕರಿಗೆ) ಕನ್ನಡ ಕಲಿಸುವ ಕೆಲಸವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇದಕ್ಕಾಗಿಯೇ ಅವರು ಕರ್ನಾಟಕ ಸರಕಾರದ ನೆರವಿನೊಂದಿಗೆ ಕನ್ನಡ ಕಲಿಕೆಗೋಸ್ಕರವಾಗಿಯೆ ವಿಶಿಷ್ಟವಾದ ಮತ್ತು ಸರಳವಾದ ಸಾಫ್ಟ್‌ವೇರನ್ನು ತಯಾರಿಸಿದ್ದಾರೆ. ಇದು ಜೆ.ಎನ್.ಯು.ವಿನ ಕನ್ನಡ ಪೀಠದ ವೆಬ್‌ಸೈಟಿನಲ್ಲಿ ಆಸಕ್ತಿಯಿರುವ ಎಲ್ಲರಿಗೂ ಉಚಿತವಾಗಿ ಉಪಲಬ್ಧವಿದೆ.

ದೆಹಲಿಯ ವಿವಿಧ ಭಾಗಗಳಲ್ಲಿರುವ ನಮ್ಮ ಕನ್ನಡ ಸಂಘಟನೆಗಳಲ್ಲಿ ಈ ಬಗೆಯ ಕನ್ನಡ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಲು ದೆಹಲಿ ಕರ್ನಾಟಕ ಸಂಘ ಎಲ್ಲ ಬಗೆಯ ಸಹಾಯ ಮತ್ತು ಸಹಕಾರಗಳನ್ನು ನೀಡಲು ಸದಾ ಸಿದ್ಧವಿದೆ. ಆದರೆ ಈ ಕಲಿಕಾ ಕೇಂದ್ರಗಳನ್ನು ನಿಯಮಿತವಾಗಿ ಮತ್ತು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಕೆಲಸದ ಜವಾಬ್ದಾರಿಯನ್ನು ಅಲ್ಲಿನ ಸಂಘಟನೆಗಳೆ ಹೊತ್ತುಕೊಳ್ಳಬೇಕು. ಅದಾಗದಿದ್ದರೆ ಕಲಿಕಾ ಕೇಂದ್ರಗಳು ನಿರಂತರವಾಗಿ ನಡೆಯುವುದಿಲ್ಲ. ಇನ್ನೂ ಮುಖ್ಯವಾಗಿ ಮಕ್ಕಳನ್ನು ಈ ಕಲಿಕಾ ಕೇಂದ್ರಗಳಿಗೆ ಆಸಕ್ತಿಯಿಂದ ಪ್ರತಿವಾರವೂ ಬರುವಂತೆ ನೋಡಿಕೊಳ್ಳುವುದು ಅತ್ಯಗತ್ಯ. ಈ ಕಾರಣಕ್ಕಾಗಿಯೇ ಕನ್ನಡ ಹಾಡು, ಆಟ, ಊಟ, ಓಟವೆಲ್ಲವೂ ಈ ತರಗತಿಗಳ ಭಾಗವಾಗಬೇಕು. ಕನ್ನಡ ಕಲಿಕೆಯೆ ಒಂದು ಆಟವಾಗಿ ಬಿಡಬೇಕು. ನಿಧಾನವಾಗಿ ಮಾತುಕತೆಗಳಿಂದ ಬರವಣಿಗೆಯತ್ತ ಸಾಗಬೇಕು. ಕನ್ನಡವನ್ನು ಓದುವತ್ತ–ಬರೆಯುವತ್ತ ಅವರಿಗೆಲ್ಲ ಆಸಕ್ತಿ ಹುಟ್ಟುವಂತೆ ಮಾಡುವುದು ಸಾಧ್ಯವಾಗಬೇಕು. ಇದು ಕಷ್ಟವೂ ಅಲ್ಲ. ಹಾಗೆಂದು ಅಷ್ಟೊಂದು ಸುಲಭವೂ ಅಲ್ಲ. ಮನೆಯಲ್ಲಿ ನಿರಂತರವಾಗಿ ಕನ್ನಡ ಮಾತನಾಡುವುದು ಅಷ್ಟೇ ಮುಖ್ಯವಾಗುತ್ತದೆ. ನಮ್ಮ ಹೆಚ್ಚಿನ ಕನ್ನಡದ ಮಕ್ಕಳಿಗೆ ಮಾತನಾಡುವುದು ಸುಲಭವಾದರೂ, ಹೊರಗೆ ಅವರ ಶಾಲೆಯಲ್ಲಿ ಮತ್ತು ಸ್ನೇಹಿತರೊಂದಿಗೆ ಹಿಂದಿಯಲ್ಲಿ ಮಾತನಾಡುವುದು ಅನಿವಾರ್ಯವಾದ್ದರಿಂದ ಅವರ ಕನ್ನಡದಲ್ಲಿ ಹಿಂದಿಯ ಬೆರಕೆಯಾಗುವುದು ಸಹಜ. ಅದು ಒಂದು ಬಗೆಯ 'ಕನ್ನಂದಿ'ಯಾಗಿ ಪರಿಣಮಿಸುವುದು ನಮಗೆಲ್ಲ ಅರಿವಿದ್ದದ್ದೇ.

ಕನ್ನಡ ಕಲಿಯುವುದರಲ್ಲಿರುವ ಮತ್ತು ಕಲಿತರೆ ಸಿಗುವ ಸವಲತ್ತುಗಳ ದೆಸೆಯಿಂದಾಗಿ ಈ ನಮ್ಮ ಕನ್ನಡ ಕಲಿಕಾ ಕೇಂದ್ರಗಳಿಗೆ ಹೊಸ ಜೀವ ಬಂದಂತಿದೆ. ಕರ್ನಾಟಕದ ಪರೀಕ್ಷೆಗಳಲ್ಲಿ, ಕೆಲಸಗಳಲ್ಲಿ ಕನ್ನಡ ತುಸು ಕಡ್ಡಾಯವಾದರೆ ನಮ್ಮವರಿಗೆ ಮತ್ತು ಕನ್ನಡೇತರರಿಗೂ ಕನ್ನಡವನ್ನು ಕಲಿಯುವುದು ಅನಿವಾರ್ಯವಾಗುತ್ತದೆ. ನಮ್ಮ ರಾಜ್ಯಕ್ಕೆ ಅಧಿಕಾರ ವಹಿಸಿಕೊಳ್ಳಲು ಬರುವ ಕನ್ನಡೇತರ ಐ.ಎ.ಎಸ್. ಅಧಿಕಾರಿಗಳನ್ನೇ ತೆಗೆದುಕೊಂಡರೆ ಅವರೆಲ್ಲರೂ ಸುಲಲಿತವಾಗಿ ಕನ್ನಡ ಮಾತನಾಡುತ್ತಾರೆ. ಅದು ಅವರಿಗೆ ಅನಿವಾರ್ಯ. ಇದರಿಂದ ಕನ್ನಡಕ್ಕೆ, ಕರ್ನಾಟಕಕ್ಕೆ ಲಾಭವೇ ಸರಿ. ಈ ರೀತಿಯ ಸವಲತ್ತುಗಳು, ಒಳ್ಳೆಯ ಮತ್ತು ಒಳಿತಾದ ಆಮಿಷಗಳು ಕನ್ನಡ ಕಲಿಯಲು, ಬರೆಯಲು ಇರಬೇಕು. ದೆಹಲಿ ಕರ್ನಾಟಕ ಸಂಘ ಈ ನಿಟ್ಟಿನಲ್ಲಿ ಸದಾ ಕಾರ್ಯನಿರತವಾಗಿರುತ್ತದೆ ಮತ್ತು ಕನ್ನಡ ಭಾಷೆ ಮತ್ತು ಸಂಸ್ಕ್ರತಿಯ ಬೆಳವಣಿಗೆಗೆ ಕಟಿಬದ್ಧವಾಗಿರುತ್ತದೆ.

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದೆಹಲಿ ಕರ್ನಾಟಕ ಸಂಘಕ್ಕೆ ಸಕ್ರಿಯವಾಗಿ ಸಹಕಾರ ನೀಡುತ್ತಾ ಬರುತ್ತಿದೆ. ಅದರಲ್ಲೂ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪರವರು ಕರ್ನಾಟಕ ಸಂಘಕ್ಕೆ ಅತಿ ಹೆಚ್ಚು ಅನುದಾನ ನೀಡಿ ನಮಗೆ ಸಹಕಾರ ನೀಡಿದ ಮಹಾಚೇತನ ಇವರು. ಪ್ರಸ್ತುತ ಕರ್ನಾಟಕದ ಮುಖ್ಯಮಂತ್ರಿಗಳಾಗಿ ಮತ್ತೊಮ್ಮೆ ಅಧಿಕಾರಕ್ಕೆ ಬಂದಿದ್ದಾರೆ. ಬರುವ ದಿನಗಳಲ್ಲಿ ಕರ್ನಾಟಕ ಸಂಘಕ್ಕೆ ಇನ್ನೂ ಹೆಚ್ಚಿನ ಸಹಕಾರ ನೀಡುತ್ತಾರೆ ಎಂಬುದು ನಮ್ಮೆಲ್ಲರ ಆಸೆ. ದೆಹಲಿ ಕರ್ನಾಟಕ ಸಂಘ ಮತ್ತು ಕನ್ನಡ ಶಾಲೆ ಇದಕ್ಕೆ ಸಹಾಯಧನ ನೀಡುವ ಮುಖಾಂತರ ಅವರ ಕೊಡುಗೆ ಅಪಾರವಾದದ್ದು. ಬರುವ ದಿನಗಳಲ್ಲಿ ಮಾನ್ಯ ಮಂತ್ರಿಗಳು ಒಳ್ಳೆಯ ಸಚಿವರನ್ನು ಕನ್ನಡ ಸಂಸ್ಕೃತಿ ಇಲಾಖೆಗೆ ಕೊಡಲಿ ಮತ್ತು ಒಳ್ಳೆಯ ಕಲೆ ಸಂಸ್ಕೃತಿಯನ್ನು ಬೆಳೆಸಲಿ ಎಂಬುದು ನಮ್ಮ ಆಸೆ. ಮತ್ತೊಮ್ಮೆ ಸಮಸ್ತ ದಿಲ್ಲಿ ಕನ್ನಡಿಗರಿಂದ ಮಾನ್ಯ ಮಂತ್ರಿಗಳಿಗೆ ಶುಭಾಶಯಗಳು.

ಕರ್ನಾಟಕದಲ್ಲಿ ಎಷ್ಟು ಉದ್ಯಮಿಗಳು ಹುಟ್ಟಿದ್ದಾರೆ, ಬೆಳೆದು ಬಂದಿದ್ದಾರೆ ಆದರೆ ಎಲೆಮರೆ ಕಾಯಿಯಾಗಿ ಕೆಲಸ ಮಾಡಿ ಬಂದ ಒಬ್ಬ ಏಕೈಕ ವ್ಯಕ್ತಿ... ಮಣ್ಣಿನ ಮಗ.... ರೈತ ಕುಟುಂಬದಿಂದ ಬಂದ ಒಬ್ಬ ಸಿದ್ಧಾರ್ಥ್.... ಸುಮಾರು ಐವತ್ತು ಸಾವಿರ ಜನರಿಗೆ ಕೆಲಸ ನೀಡುವ ಮುಖಾಂತರ ಕಾಫಿ ಬೆಳೆಯನ್ನು ವಿಶ್ವದಾದ್ಯಂತ ಕಾಫಿ ಡೇ ಮುಖಾಂತರ ಬೆಳಕಿಗೆ ತಂದ ಮಹಾನ್ ಚೇತನ. ಯಾವುದೇ ಆಸೆಗಳಿಗೆ ಒಳಗಾಗದೆ ರಾಜಕೀಯಕ್ಕೆ ಬರದೆ ತನ್ನ ಕೊಡುಗೆಯನ್ನು ಕೊಟ್ಟ ಒಂದು ಹಳ್ಳಿಯ ರೈತರ ರೈತಾಪಿ ಮಗ ಶ್ರೀ ಸಿದ್ಧಾರ್ಥ ನಮ್ಮನ್ನು ಅಗಲಿದ್ದಾರೆ. ಇವರ ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿ ನೀಡಲಿ. ಇಷ್ಟು ಕನ್ನಡದ ಕುಟುಂಬಗಳಿಗೆ ಸಹಕಾರವಾಗಿ ನಿಂತ ಮಹಾನ್ ಚೇತನ ಶ್ರೀ ಸಿದ್ಧಾರ್ಥರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ದೆಹಲಿ ಕರ್ನಾಟಕ ಸಂಘ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ದಿನಾಂಕ 17.08.2019ರಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹರಿಕಥಾ ಕಾರ್ಯಕ್ರಮವೂ ಸಹ ಇದೆ, ವೀಣಾ ವಾದನವೂ ಸಹ ಇದೆ. ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ.

ತಮಗೆಲ್ಲರಿಗೂ ವರಲಕ್ಷ್ಮಿ ಹಬ್ಬದ ಮತ್ತು ಶ್ರೀ ಗೌರಿ ಗಣೇಶನ ಹಬ್ಬದ ಶುಭಾಶಯಗಳು

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**ಆಗಸ್ಟ್ 15, 2019-ಗುರುವಾರ, ಬೆಳಿಗ್ಗೆ 9.00ಗಂಟೆಗೆ**

**ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ**
**ಧ್ವಜಾರೋಹಣ ಮತ್ತು ದೇಶಭಕ್ತಿಗೀತೆಗಳು**



**ದೆಹಲಿ ಕರ್ನಾಟಕ ಸಂಘ**
**,ದಕ್ಷಿಣ ಕನ್ನಡ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಮಂಗಳೂರು**

**ಸಹಯೋಗದೊಂದಿಗೆ**

**ಆಗಸ್ಟ್ 17, 2019-ಶನಿವಾರ, ಸಂಜೆ : 4.00 ರಿಂದ**

**ಅಂತರ್‌ರಾಜ್ಯ ಮಟ್ಟದ ಚುಟುಕು ಕವನ, ಕಾವ್ಯಧಾರೆ**

**ಸಾಂಸ್ಕೃತಿಕ ಕಾರ್ಯಕ್ರಮ**

**ವೀಣಾ ವಾದನ :** ಕು. ದಿಶಾ ಪಿ. ರಾವ್, ಉಡುಪಿ

ಭಕ್ತ ಕನಕದಾಸರು : ಹರಿಕಥೆ

**ಹರಿಕಥಾ ವಿದೂಷಿ :** ಶ್ರೀಮತಿ ರುಕ್ಮಿಣಿ ಹಂಡೆ, ಉಡುಪಿ

ಹಾಗೂ

ದೇಶಭಕ್ತಿಗೀತೆ, ಭಾವಗೀತೆ, ಜಾನಪದ ಗೀತೆ, ಗಮಕ ವ್ಯಾಖ್ಯಾನ ಮತ್ತು ಹಚ್ಚೇವು ಕನ್ನಡದ ದೀಪ ನೃತ್ಯರೂಪಕ

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಆಗಸ್ಟ್, 2019ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಆಗಸ್ಟ್, 2019ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25 ಆಗಸ್ಟ್, 2019ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಆಗಸ್ಟ್, 2019ರಂದು ಸಾಯಂಕಾಲ 4 ಗಂಟೆಯಿಂದ.

**(ವಿಶೇಷ ಸೂಚನೆ : ವೈದ್ಯರನ್ನು ಸಂಪರ್ಕಿಸುವ ಮೊದಲು ಸಂಘಕ್ಕೆ ದೂರವಾಣಿ ಮುಖಾಂತರ ವೈದ್ಯರ ಉಪಸ್ಥಿತಿಯನ್ನು ಖಚಿತಪಡಿಸಿಕೊಳ್ಳಬೇಕಾಗಿ ವಿನಂತಿ.)**

# ಹರಿದು ಬಂದ ಗಾನಸುಧೆ

## ಸಂಘದಲ್ಲಿ ಬಾಲಚಂದ್ರ ನಾಕೋಡ, ಅರ್ಪಿತಾ ಜೋಷಿ ಮತ್ತು ಭೀಮಸೇನ ಭಜಂತ್ರಿ ಗಾಯನ




ಹಿರಿಯ ಹಿಂದುಸ್ತಾನಿ ಗಾಯಕ ಬಾಲಚಂದ್ರ ನಾಕೋಡ, ಗಾಯಕಿ ಅರ್ಪಿತಾ ಜೋಷಿ ಮತ್ತು ದೆಹಲಿಯಲ್ಲಿರುವ ಕಲಾವಿದ ಭೀಮಸೇನ ಭಜಂತ್ರಿಯವರಿಂದ ದಿನಾಂಕ 14.07.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಅಪೂರ್ವವಾದ 'ಸಂಗೀತ ಸಂಜೆ' ಜರಗಿತು.

'ಗ್ವಾಲಿಯರ್-ಕಿರಾಣ' ಹಿಂದುಸ್ತಾನಿ ಗಾಯನ ಶೈಲಿಗೆ ಹೆಸರಾದ ಬಾಲಚಂದ್ರ ನಾಕೋಡ ಅವರು ಕರ್ನಾಟಕ ಸರಕಾರದಿಂದ 'ಗಾನ ಗಂಧರ್ವ' ಪ್ರಶಸ್ತಿಯ ಗೌರವ ಪಡೆದಿದ್ದಾರೆ. ಅವರ ಸಿರಿಕಂಠದಿಂದ ಮೂಡಿ ಬಂದ ಗಾಯನ ದೆಹಲಿ ಕನ್ನಡಿಗರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ಗಾಯಕಿ ಅರ್ಪಿತಾ ಜೋಷಿಯವರು ಬಾಲಚಂದ್ರ ನಾಕೋಡ ಅವರ ಶಿಷ್ಯೆಯಾಗಿದ್ದು



ಕಲಾವಿದ ಬಾಲಚಂದ್ರ ನಾಕೋಡ್





**ಕಲಾವಿದೆ ಅರ್ಪಿತಾ ಜೋಷಿ**

**ಕಲಾವಿದ ಭೀಮಸೇನ ಭಜಂತ್ರಿ**

ಇದೇ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಗಾಯನ ಪ್ರಸ್ತುತಪಡಿಸಿದರು. ಅವರು ಸಂಗೀತ ಪ್ರಿಯರು ನೆನಪಿನಲ್ಲಿ ಉಳಿಯುವಂತೆ ಸೊಗಸಾಗಿ ಹಾಡಿದರು. ಅರ್ಪಿತಾ ಅವರು ಕೇಂದ್ರ ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರ ಖಾತೆ ಸಚಿವ ಸನ್ಮಾನ್ಯ ಪ್ರಹ್ಲಾದ್ ಜೋಷಿಯವರ ಪುತ್ರಿ. ಇದೇ ಸಂದರ್ಭದಲ್ಲಿ ಸಚಿವ ಶ್ರೀ ಪ್ರಹ್ಲಾದ್ ಜೋಷಿ ಮತ್ತು ಅವರ ಧರ್ಮಪತ್ನಿ ಹಾಜರಿದ್ದು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದರು.

ದೆಹಲಿಯಲ್ಲಿರುವ ಕಲಾವಿದ ಭೀಮಸೇನ ಭಜಂತ್ರಿಯವರು ಕೂಡಾ ಅತ್ಯುತ್ತಮ ಗಾಯನ ಪ್ರಸ್ತುತಪಡಿಸಿದರು. ಇವರೂ ಕೂಡಾ ಬಾಲಚಂದ್ರ ನಾಕೋಡ ಅವರ ಶಿಷ್ಯರಾಗಿದ್ದು ಈ ಸಂಗೀತ ಸಂಜೆ ಗುರು-ಶಿಷ್ಯರ ಸಮಾಗಮದ ಅಪೂರ್ವ ಕಾರ್ಯಕ್ರಮವಾಗಿ ಸ್ಮರಣೀಯಗೊಂಡಿತು.

ಕಲಾವಿದ ಸುಧೀರ್ ಫಡ್ನೀಸ್ ಅವರು ತಾಳ, ಹಾರ್ಮೋನಿಯಂನಲ್ಲಿ ಸುಮಿತ್ ಮಿಶ್ರಾ ಮತ್ತು ತಬಲಾದಲ್ಲಿ ರಾಘವೇಂದ್ರ ನಾಕೋಡ ಇವರು ಸಹಕರಿಸಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಎಲ್ಲ ಕಲಾವಿದರನ್ನು ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಿದರು. ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಕಾರ್ಯಕ್ರಮ ನಿರೂಪಿಸಿದರು. •

# ಸುಧೀರ್ ಫಡ್ನೀಸ್ ಅವರಿಗೆ ಪಿಎಚ್‌ಡಿ ಆರ್ಟ್ ಆ್ಯಂಡ್ ಕಲ್ಚರ್ ಪುರಸ್ಕಾರ




**ಚಿತ್ರಕಲೆ ಮತ್ತು ಸಂಗೀತ ಸೇರಿದಂತೆ ಬಹುಮುಖ ಪ್ರತಿಭೆಯ ಕಲಾವಿದ ಸುಧೀರ್ ಫಡ್ನೀಸ್ ಅವರಿಗೆ ದೆಹಲಿಯ ಪಿಎಚ್‌ಡಿ ಆರ್ಟ್ ಆ್ಯಂಡ್ ಕಲ್ಚರ್ ಸಂಸ್ಥೆಯು 'ಪಿಎಚ್‌ಡಿ ಆರ್ಟ್ ಆ್ಯಂಡ್ ಕಲ್ಚರ್ ಸಂಮಾನ' ಪುರಸ್ಕಾರ ನೀಡಿ ಗೌರವಿಸಿದೆ. ಖ್ಯಾತ ಕಥಕ್ ಕಲಾವಿದ ಪದ್ಮವಿಭೂಷಣ ಪಂಡಿತ್ ಬಿರ್ಜು ಮಹಾರಾಜ್ ಅವರು ದಿನಾಂಕ 12.07.2019ರಂದು ಫಡ್ನೀಸ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಸುಧೀರ್ ಫಡ್ನೀಸ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.**

# ಸಂಸತ್ತು ಪವಿತ್ರ ಸ್ಥಳ

## ಸಂಘದ ಅಭಿನಂದನೆ ಸ್ವೀಕರಿಸಿ ಸಚಿವ ಡಿ.ವಿ. ಸದಾನಂದ ಗೌಡ



**ಪತ್ನಿಯೊಂದಿಗೆ ಅಭಿನಂದನೆ ಸ್ವೀಕರಿಸಿದ ಕೇಂದ್ರ ಸಚಿವ ಸನ್ಮಾನ್ಯ ಶ್ರೀ ಡಿ.ವಿ. ಸದಾನಂದ ಗೌಡ**

ಸಂಸತ್ತು ಪವಿತ್ರ ಸ್ಥಳ, ಇಲ್ಲಿ ಸಂಸದರಿಗೆ ಆಯಾ ರಾಜ್ಯದ ಬೆಳವಣಿಗೆ ಕುರಿತು ಚರ್ಚಿಸಿ ಅಭಿವೃದ್ಧಿಪಡಿಸುವ ಅವಕಾಶವಿದೆ ಎಂದು ಕೇಂದ್ರ ರಸಗೊಬ್ಬರ ಮತ್ತು ರಾಸಾಯನಿಕ ಖಾತೆ ಸಚಿವ ಶ್ರೀ ಡಿ.ವಿ. ಸದಾನಂದ ಗೌಡ ಅವರು ಅಭಿಪ್ರಾಯಪಟ್ಟರು.

ಅವರು ದಿನಾಂಕ 18.07.2019ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ 'ನೂತನ ಸಂಸದರು ಮತ್ತು ಕರ್ನಾಟಕದ ಕೇಂದ್ರ ಸಚಿವರಿಗೆ ಅಭಿನಂದನಾ ಕಾರ್ಯಕ್ರಮ'ದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡುತ್ತಿದ್ದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ನೂತನವಾಗಿ ಚುನಾಯಿತಗೊಂಡ ಸಂಸದರನ್ನು ಅಭಿನಂದಿಸುವ ಹಿನ್ನೆಲೆಯಲ್ಲಿ ಈ ಸಮಾರಂಭವನ್ನು ಸಂಘ ಆಯೋಜಿಸಿತ್ತು.

ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘದಿಂದ ನಮ್ಮನ್ನು ಅಭಿನಂದಿಸಿ ನಮ್ಮ ಕೆಲಸ ಕಾರ್ಯಗಳ ಹೊಣೆಯನ್ನು ಮತ್ತಷ್ಟು ಹೆಚ್ಚಿಸಿದ್ದೀರಿ. ನಾವು ಜವಾಬ್ದಾರಿಯಿಂದ ಎಚ್ಚೆತ್ತುಕೊಂಡು ಕರ್ನಾಟಕಕ್ಕೆ ದುಡಿಯುವ ಹಾಗೆ ಮಾಡಿದ್ದೀರಿ ಎಂದು ಹೇಳಿದ ಸಚಿವರು, ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಕಲಾವಿದರುಗಳನ್ನು ಕರೆಸಿಕೊಂಡು ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ದೆಹಲಿ ಕರ್ನಾಟಕ ಸಂಘ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಂತೆ ಕೆಲಸ ಮಾಡುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೋಲಾರದ ಸಂಸದ ಶ್ರೀ ಮುನಿಸ್ವಾಮಿ ಅವರು ಮಾತನಾಡಿ ಮುಂದಿನ ಐದು ವರ್ಷ ನಾವು ನಿಮ್ಮ ಕುಟುಂಬದವರು, ನಾವು ನಿಮ್ಮೊಂದಿಗೆ ಇರುತ್ತೇವೆ. ನಿಮ್ಮ ಅಭಿನಂದನೆಗೆ ನಾವು ಚಿರಋಣಿಗಳು ಎಂದು ಅಭಿನಂದನೆಯನ್ನು ಸ್ವೀಕರಿಸಿ ಹೇಳಿದರು. ಸಂಸದರಾದ ಚಿಕ್ಕೋಡಿಯ ಶ್ರೀ ಅಣ್ಣಾ ಸಾಹೇಬ್ ಜೊಲ್ಲೆ ಕಲಬುರಗಿಯ ಶ್ರೀ ಉಮೇಶ್ ಜಾಧವ್, ಬಳ್ಳಾರಿಯ ಶ್ರೀ ದೇವೇಂದ್ರಪ್ಪ ಹಾಗೂ ರಾಜ್ಯಸಭಾ ಸದಸ್ಯರುಗಳಾದ ಡಾ. ಪ್ರಭಾಕರ ಕೋರೆ ಮತ್ತು ಪ್ರೊ. ರಾಜೀವ್ ಗೌಡ ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿ ಸಂಘ ಆಹ್ವಾನವಿತ್ತರೆ ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇವೆ, ಕನ್ನಡಕ್ಕಾಗಿ ನಾವು ಸದಾಕಾಲ ದುಡಿಯುತ್ತೇವೆ ಎಂದು ಹೇಳಿದರು.

ಕರ್ನಾಟಕದ ಗಡಿನಾಡು ಪ್ರದೇಶವಾದ ಸೊಲ್ಲಾಪುರದ ಸಂಸದ ಕನ್ನಡಿಗ ಡಾ. ಜಯಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಅಭಿನಂದನೆ ಸ್ವೀಕರಿಸಿ ಕನ್ನಡಾಭಿಮಾನ ಮೆರೆದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಕನ್ನಡಕ್ಕಾಗಿ ನಾವೆಲ್ಲರೂ ಜೊತೆಯಾಗಿ ದುಡಿಯೋಣ ಎನ್ನುತ್ತಾ ಎಲ್ಲ ಸಂಸದರು ಮತ್ತು ಸಚಿವರನ್ನು ಅಭಿನಂದಿಸಿದರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘಕ್ಕೆ ಕರ್ನಾಟಕದ ಎಲ್ಲ ಸಂಸದರು, ಸಚಿವರು ಸ್ಪಂದಿಸುತ್ತಿರುವುದನ್ನು ಸ್ಮರಿಸಿದರು. ಸಂಘದ ಬಳಿಯ ಮೆಟ್ರೋ ನಿಲ್ದಾಣಕ್ಕೆ ಸರ್.ಎಂ. ವಿಶ್ವೇಶ್ವರಯ್ಯ ಅವರ ಹೆಸರಿಡಲು ಮತ್ತು ಬ್ಯಾಂಕಿಂಗ್ ಹಾಗೂ ರೈಲ್ವೇ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸುವಲ್ಲಿ ಸಚಿವ ಶ್ರೀ ಡಿ.ವಿ. ಸದಾನಂದ ಗೌಡರು ಸ್ಪಂದಿಸಿ ಸಹಕರಿಸಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಿದರು.

ಯು.ಪಿ.ಎಸ್.ಸಿ. ಪರೀಕ್ಷೆಗೆ ಕರ್ನಾಟಕದಿಂದ ದೆಹಲಿಗೆ ಬರುವ ಆಕಾಂಕ್ಷಿಗಳಿಗೆ ವಸತಿ ವ್ಯವಸ್ಥೆಯನ್ನು ಮಾಡಬೇಕೆಂಬ ದೆಹಲಿ ಕರ್ನಾಟಕ ಸಂಘದ ಯೋಜನೆಗೆ ಸಂಸದರು ಧನಸಹಾಯ ನೀಡಲು ಒಪ್ಪಿಗೆಯನ್ನು ನೀಡಿದರು. ವಿಶೇಷವಾಗಿ ಮಾನ್ಯ ರಾಜ್ಯಸಭಾ ಸದಸ್ಯರಾದ ಡಾ. ಪ್ರಭಾಕರ ಕೋರೆ ಹಾಗೂ ಪ್ರೊ. ರಾಜೀವ್ ಗೌಡ ಅವರು ಹತ್ತು ಲಕ್ಷ ರೂಪಾಯಿಯನ್ನು ನೀಡುವುದಾಗಿ ಹೇಳಿದರು. ಭಾಗವಹಿಸಿದ್ದ ಎಲ್ಲ ಸಂಸದರು ಸಂಘ ಉತ್ತಮ ಕೆಲಸ ಕಾರ್ಯಗಳನ್ನು ಮಾಡುತ್ತಿದೆ ಎಂದು ಶ್ಲಾಘಿಸಿದರು.

ದೆಹಲಿ ಕರ್ನಾಟಕ ಸಂಘದ ಸದಸ್ಯರು ನಾಡಗೀತೆ ಹಾಡುವುದರೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ. ಕಾರ್ಯಕ್ರಮ ನಿರೂಪಿಸಿದರು.

## ಅಭಿನಂದಿತ ಸಂಸದರು




**ಅಭಿನಂದನೆ ಸ್ವೀಕರಿಸಿದ ರಾಜ್ಯಸಭಾ ಸದಸ್ಯ ಡಾ. ಪ್ರಭಾಕರ ಕೋರೆ**



**ಅಭಿನಂದನೆ ಸ್ವೀಕರಿಸಿದ ರಾಜ್ಯಸಭಾ ಸದಸ್ಯ ಪ್ರೊ. ರಾಜೀವ್ ಗೌಡ**

## ಅಭಿನಂದಿತ ಸಂಸದರು



ಅಭಿನಂದನೆ ಸ್ವೀಕರಿಸಿದ ಬಳ್ಳಾರಿ ಸಂಸದ ಸನ್ಮಾನ್ಯ ಶ್ರೀ ದೇವೇಂದ್ರಪ್ಪ





ಅಭಿನಂದನೆ ಸ್ವೀಕರಿಸಿದ ಚಿಕ್ಕೋಡಿ ಸಂಸದ ಸನ್ಮಾನ್ಯ ಶ್ರೀ ಅಣ್ಣಾ ಸಾಹೇಬ್ ಜೊಲ್ಲೆ



ಅಭಿನಂದನೆ ಸ್ವೀಕರಿಸಿದ ಕೋಲಾರ ಸಂಸದ ಸನ್ಮಾನ್ಯ ಶ್ರೀ ಮುನಿಸ್ವಾಮಿ



ಅಭಿನಂದನೆ ಸ್ವೀಕರಿಸಿದ ಕಲಬುರ್ಗಿ ಸಂಸದ ಸನ್ಮಾನ್ಯ ಡಾ. ಉಮೇಶ್ ಜಾಧವ್




ಅಭಿನಂದನೆ ಸ್ವೀಕರಿಸಿದ ಸೊಲ್ಲಾಪುರದ ಸಂಸದ ಸನ್ಮಾನ್ಯ ಡಾ. ಜಯಸಿದ್ದೇಶ್ವರ ಶಿವಾಚಾರ್ಯ ಸ್ವಾಮಿ

# ಕಾರಂತರ 'ಅಳಿದ ಮೇಲೆ' ಆಂಗ್ಲ ಅನುವಾದ ಬಿಡುಗಡೆ




ಡಾ. ಪುರುಷೋತ್ತಮ ಬಿಳಿಮಲೆ, ಪ್ರೊ. ಪ್ರಮೋದ್ ಮುತಾಲಿಕ್, ಕೆ.ಎಂ. ಜಾನಕಿ ಮತ್ತು ಪ್ರೊ. ಎಚ್.ಎಸ್. ರಾಘವೇಂದ್ರ ರಾವ್


ಶಿವರಾಮ ಕಾರಂತರ "ಅಳಿದ ಮೇಲೆ" ಕಾದಂಬರಿಯ ಇಂಗ್ಲೀಷ್ ಅನುವಾದ "ಬಿಯಾಂಡ್ ಲೈಫ್" ಪುಸ್ತಕ ಬಿಡುಗಡೆ ಮತ್ತು ಶಿವರಾಮ ಕಾರಂತರ ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಜುಲೈ 27ರಂದು ಹಮ್ಮಿಕೊಂಡಿತ್ತು. ಕನ್ನಡದ ಖ್ಯಾತ ವಿಮರ್ಶಕರಾದ ಪ್ರೊ. ಎಚ್.ಎಸ್. ರಾಘವೇಂದ್ರ ರಾವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕೆ.ಎಂ. ಜಾನಕಿ ಮತ್ತು ಈ ಕೃತಿಯ ಅನುವಾದಕರಾದ ಪ್ರೊ. ಪ್ರಮೋದ್ ಮುತಾಲಿಕ್ ಅವರು ಕೃತಿ ಬಿಡುಗಡೆಗೊಳಿಸಿದರು. ಈ ಮೂಲಕ ಕನ್ನಡ ಕೃತಿಗಳು ಬೇರೆ ಭಾಷೆಗೆ ಬಾಷಾಂತರವಾಗುತ್ತಿಲ್ಲ ಎಂಬ ಕೊರತೆಯನ್ನು ಕನ್ನಡ ಅಧ್ಯಯನ ಪೀಠ ತುಂಬುವ ಕೆಲಸ ಮಾಡುತ್ತಿದೆ.

ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಪ್ರೊ. ಎಚ್.ಎಸ್. ರಾಘವೇಂದ್ರ ರಾವ್ ಅವರು "ಕಾರಂತರ ಎಲ್ಲಾ ಕೃತಿಗಳು ಎಲ್ಲಾ ಕಾಲಕ್ಕೂ ಸಲ್ಲುವ ಚಿರಂಜೀವಿ ಕೃತಿಗಳು" ಎಂದು ಅಭಿಪ್ರಾಯಪಟ್ಟರು. ಅಂದರೆ ಕನ್ನಡ ಸಾಹಿತ್ಯದಲ್ಲಿ ರಚನೆಯಾದ ಎಲ್ಲಾ ರೀತಿಯ ಸೃಜನಾತ್ಮಕ ಬರವಣಿಗೆಗೆ ಕಾರಂತರ ಕೃತಿಗಳು ಮಾದರಿ ಎಂಬ ಅನಿಸಿಕೆ ವ್ಯಕ್ತಪಡಿಸಿದರು. ಕಾರಂತರ ಚೋಮನ ದುಡಿ ದಲಿತ ಸಾಹಿತ್ಯದ ಬುನಾದಿಯಾದರೆ, ಸರಸಮ್ಮನ ಸಮಾಧಿ ಮಹಿಳಾ ಸಾಹಿತ್ಯಕ್ಕೆ ಮೂಲ. ಹಾಗೆಯೇ ಮರಳಿ ಮಣ್ಣಿಗೆ ಮೂರು ಪೀಳಿಗೆಯ ಕತೆ ಹೇಳುವುದರ ಜೊತೆ ಆಧುನಿಕ ಶಿಕ್ಷಣ ಒಳಿತನು ಮಾಡಿರುವ ಹಾಗೆ ಕುಟುಂಬಗಳು ಹೇಗೆ ವಿಘಟನೆ ಹೊಂದುತ್ತಿವೆ ಎಂದು ಹೇಳುತ್ತದೆ. ಇದು ನಂತರ ಅನೇಕ ಕನ್ನಡದ ಲೇಖಕರ ಕೃತಿಗಳಿಗೆ ವಸ್ತುವಾಗಿದೆ ಎಂದು ವಿವರಿಸಿದರು.

ಅಳಿದ ಮೇಲೆ ಕೃತಿ ಅನುವಾದಕರಾದ ಪ್ರಮೋದ್ ಮುತಾಲಿಕ್ ಅವರು ಮಾತನಾಡಿ ಶಿವರಾಮ ಕಾರಂತರು ನಾಸ್ತಿಕರಾಗಿ ಕಂಡರೂ ಸಹ ಆಳದಲ್ಲಿ ಉದಾರವಾದಿಗಳಾಗಿದ್ದರು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಕೆ.ಎಂ. ಜಾನಕಿಯವರು ಮಾತನಾಡಿ ಕನ್ನಡದ ಕೃತಿಗಳು ಇಂಗ್ಲೀಷ್‌ಗೆ ಅನುವಾದವಾಗುತ್ತಿರುವುದು ಖುಷಿಯ ಸಂಗತಿ, ಈ ರೀತಿಯ ಕೆಲಸಗಳು ಇನ್ನೂ ಹೆಚ್ಚು ಹೆಚ್ಚು ಆಗಬೇಕು. ಕನ್ನಡ ಅಧ್ಯಯನ ಪೀಠ ಶಾಶ್ವತವಾಗಿ ಉಳಿಯುವ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಕನ್ನಡ ಅಧ್ಯಯನ ಪೀಠದಲ್ಲಿ ಕನ್ನಡ ಕಲಿಯುತ್ತಿರುವ ಚೈನಾ ದೇಶದ ವಿದ್ಯಾರ್ಥಿ ಬಾಂಸುರಿ "ಕನ್ನಡ ಕಲಿಯುತ್ತಿರುವುದು ನನಗೆ ಸಂತಸ ನೀಡಿದೆ. ನಾನು ಕಳೆದ ತಿಂಗಳು ಬೆಂಗಳೂರು ಹೋದಾಗ ಕನ್ನಡದಲ್ಲಿ ಅಟೋದವರ ಜೊತೆ ಮತ್ತು ಸ್ನೇಹಿತರ ಜೊತೆ ಸಂವಾದ ಮಾಡಲು ಸಾಧ್ಯವಾಯಿತು" ಎಂದು ಕನ್ನಡದಲ್ಲಿ ಮಾತನಾಡಿ ನೆರೆದವರನ್ನು ಚಕಿತಗೊಳಿಸಿದರು.




ಕೃತಿಯ ಮುಖಪುಟ

ಕೃಷ್ಣಮೂರ್ತಿ

# ಅಂಬೇಡ್ಕರ್‌ರವರ ಪ್ರತಿಮೆಗಳಿಗಿಂತ ಅವರ ಆದರ್ಶಗಳನ್ನು ಎದೆಗಿಳಿಸಿಕೊಳ್ಳಬೇಕಾಗಿದೆ

## - ಡಿ. ಉಮಾಪತಿ



ಬಿ. ರಾಚಯ್ಯ ರಾಜ್ಯ ಪ್ರಶಸ್ತಿ ಸ್ವೀಕರಿಸಿದ ಹಿರಿಯ ಪತ್ರಕರ್ತ ಶ್ರೀ ಡಿ. ಉಮಾಪತಿ

**ದೆಹಲಿಯಲ್ಲಿರುವ ಕರ್ನಾಟಕದ ಪ್ರಮುಖ ಚಿಂತಕರು ಮತ್ತು ಪತ್ರಕರ್ತರಾದ ಡಿ. ಉಮಾಪತಿಯವರಿಗೆ ಇತ್ತೀಚೆಗೆ ಕರ್ನಾಟಕ ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರ ಸಂಘವು 'ಬಿ. ರಾಚಯ್ಯ ರಾಜ್ಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಚಿತ್ರದುರ್ಗದ ಶ್ರೀ ಮುರುಘಾಮಠದ ಅಲ್ಲಮ ಪ್ರಭು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿ ಡಿ. ಉಮಾಪತಿಯವರು ಆಡಿದ ಮಾತುಗಳು ಇಲ್ಲಿದೆ. (ಕೃಪೆ : ನಾನೂ ಗೌರಿ).**

**ಹಿರಿಯ ಪತ್ರಕರ್ತ ಡಿ. ಉಮಾಪತಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳು.**

**-ಸಂಪಾದಕ**

ಅಂಬೇಡ್ಕರ್ ಬಹುತೇಕ ರಾಜಕೀಯ ರೂಪವಾಗಿ ಸಿಕ್ಕಿದ್ದಾರೆ ವಿನಃ ಅವರ ಆಶಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಆಳುವವರು ಮನಸ್ಸು ಮಾಡುತ್ತಿಲ್ಲ. ಉಣ್ಣದ ವಿಗ್ರಹಕ್ಕೆ ಭೋಜನವಿಡುವ ಡಾಂಭಿಕತನ ಇಂದಿನ ಎಲ್ಲಾ ರಾಜಕೀಯ ಪಕ್ಷಗಳಲ್ಲಿದೆ. ದಲಿತರನ್ನು ಸಮಾನವಾಗಿ ನಡೆಸಿಕೊಳ್ಳಬೇಕೆಂಬ ಅಂಬೇಡ್ಕರ್ ಅವರ ಮಾತಿಗೆ ರಾಜಕೀಯ ಪಕ್ಷಗಳು ಕಿವುಡಾಗಿವೆ. ಮನುಸ್ಮೃತಿಯನ್ನು ಪಾಲಿಸುವವರೆ ಇಂದು ದೇಶವನ್ನು ಆಳುತ್ತಿದ್ದಾರೆ.

ಅಂಬೇಡ್ಕರ್‌ರವರು ಸರ್ವಶ್ರೇಷ್ಠರು ಎಂದು ಸಂಘಪರಿವಾರದ ಮುಖವಾಣಿ ಪತ್ರಿಕೆಯಲ್ಲಿ ಸಂಪಾದಕೀಯದಲ್ಲಿ ಬರೆದವರು, ಅವರು ಬರೆದ ಸಂವಿಧಾನವನ್ನು ಬದಲಾಯಿಸಲು ಹೊರಟಿದ್ದಾರೆ. ಹೀಗೆ ಎರಡೂ ಬಗೆಯ ಪಾತ್ರಗಳನ್ನು ಇಂದು ಮಾಡಲಾಗುತ್ತಿದೆ. ದಲಿತರ ಮತಗಳನ್ನು ಸೆಳೆಯಲು ಪಕ್ಷಗಳು ಅಂಬೇಡ್ಕರ್ ಅವರನ್ನು ದೋಚುತ್ತಿದ್ದು, ನಿಜವಾದ ಅಂಬೇಡ್ಕರ್ ಅವರನ್ನು ಕೊಲ್ಲುವ ಕೆಲಸ ಮಾಡುತ್ತಿದ್ದಾರೆ.

ಅಂಬೇಡ್ಕರ್ ಅವರ ಹೆಸರಿನಲ್ಲಿ ದೊಡ್ಡ ದೊಡ್ಡ ವಿಚಾರಗೋಷ್ಠಿ, ಮಹಲುಗಳನ್ನು ಕಟ್ಟಲಾಗುತ್ತಿದೆ, ಆದರೆ ಅದೇ ಸಂದರ್ಭದಲ್ಲಿ ಅವರು ಕೊಟ್ಟ ಸಂವಿಧಾನವನ್ನು ಕಾಲ ಕೆಳಗೆ ತುಳಿಯುವ ಕೆಲಸವನ್ನೂ ಇಂದು ಮಾಡಲಾಗುತ್ತಿದೆ. ಇವತ್ತು ಬೇಟೆಯ ನಾಯಿಯ ಜೊತೆಗೂ ನಾವಿದ್ದೇವೆ, ಮೊಲದ ಹಿತ ಕಾಯಲು ಅದರ ಜೊತೆಗೂ ನಾವಿದ್ದೇವೆ ಎಂಬ ಆಷಾಡಭೂತಿತನವನ್ನು ನಮ್ಮನ್ನಾಳುವವರಲ್ಲಿ ಕಾಣುತ್ತಿದ್ದೇವೆ. ಇದು ಅಂಬೇಡ್ಕರ್ ಅವರಿಗೆ ಮಾಡಿದ ಅವಮಾನ. ವಂಚಿತರನ್ನು ಮೇಲೆತ್ತುವ ಅಂಬೇಡ್ಕರ್ ಅವರ ಚಿಂತನೆಗಳು ಇನ್ನು ಈಡೇರಿಲ್ಲ. ಎಲ್ಲೆಡೆ ಅಂಬೇಡ್ಕರ್ ಅವರ ಪ್ರತಿಮೆ, ಭವನಗಳ ನಿರ್ಮಾಣಕ್ಕಿಂತ ಅವರ ಆದರ್ಶಗಳನ್ನು ಎದೆಗಿಳಿಸಿಕೊಂಡು ಮುನ್ನಡೆಯಬೇಕಾದ ಸಂದರ್ಭ ಬಂದಿದೆ. •

# ದೆಹಲಿಯನ್ನು ಅದಮ್ಯವಾಗಿ ಪ್ರೀತಿಸಿದ್ದ ಶೀಲಾ ದೀಕ್ಷಿತ್



ದೆಹಲಿಯ ರಸ್ತೆಗಳಲ್ಲಿ ಯಮದೂತ ರೆಡ್ ಲೈನ್ / ಬ್ಲೂ ಲೈನ್ ಬಸ್ಸುಗಳು ಯರ್ರಾಬಿರ್ರಿಯಾಗಿ ಓಡುತ್ತಿದ್ದವು. ಹೊಟ್ಟೆ ಬಿರಿಯುವಂತೆ ಜನರನ್ನು ತುಂಬಿಕೊಂಡು ರೆಡ್ ಲೈನ್ ಮತ್ತು ಬ್ಲೂ ಲೈನ್ ಬಸ್ಸುಗಳ ಜೊತೆ ಪೈಪೋಟಿಯಲ್ಲಿ ಓಡಾಡುತ್ತಿದ್ದದ್ದು ಮಿನಿ ಬಸ್ಸುಗಳು. ಇವು ದೌಲಾ ಕುಂವಾದಿಂದ ನೆಹರೂಪ್ಲೇಸಿನವರೆಗೂ ಓಡಾಡುತ್ತಿದ್ದು ಸಮಯಕ್ಕೆ ಸರಿಯಾಗಿ ಬಾರದ, ಬಂದರೂ ಹತ್ತಲಾಗದಷ್ಟು ವೇಗವಾಗಿ ಹೊರಟೇಬಿಡುತ್ತಿದ್ದ ಡಿಟಿಸಿ ಬಸ್ಸುಗಳಿಗಿಂತ ಅಲ್ಲಲ್ಲಿ ನಿಂತು ಸವಾರರನ್ನು ಹತ್ತಿಸಿಕೊಳ್ಳುತ್ತಿದ್ದ ಮಿನಿಬಸ್, ರೆಡ್ ಲೈನ್, ಬ್ಲೂ ಲೈನ್ ಖಾಸಗಿ ಬಸ್ಸುಗಳು ದಿಲ್ಲಿ ಬದುಕಿಗೆ ಅನಿವಾರ್ಯವಾಗಿದ್ದವು. ಆದರೆ ಅನಕೂಲಕರವಾಗಿದ್ದಿಲ್ಲ. ಪರಿಸರ ಸ್ನೇಹಿಯಾಗಿದ್ದಿಲ್ಲ. ದೆಹಲಿಯ ಕೆಟ್ಟ ಸಾರಿಗೆ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಿದ್ದು, ದೆಹಲಿಯ ಉಸಿರನ್ನು ಹಸಿರಾಗಿಸಿದ್ದು ಶೀಲಾ ದೀಕ್ಷಿತ್ ಅವರ ದಕ್ಷ ಆಡಳಿತದ ಕಾಲ. ದಿಲ್ಲಿಯ ಹಳೆಗೋಡೆಯ ಮೇಲೆ ಹೊಸ ಇತಿಹಾಸವನ್ನು ಬರೆದದ್ದು ಶೀಲಾ ದೀಕ್ಷಿತ್ ಅವರ ದೂರದೃಷ್ಟಿ ಮತ್ತು ದಿಲ್ಲಿಯ ಮೇಲಿರುವ ಅದಮ್ಯ ಪ್ರೇಮ.

ಕಾಲ ಬದಲಾದಂತೆಲ್ಲ ವಲಸಿಗರ ಸಂಖ್ಯೆ ಬೆಳೆದಂತೆ ಊರಿಗೆ ಉತ್ತಮ ಸಾರಿಗೆ, ಹೆಚ್ಚುತ್ತಿದ್ದ ಟ್ರಾಫಿಕ್ ಜಾಮ್‌ಗಳನ್ನು ನಿಯಂತ್ರಿಸುವಂಥ ಮೇಲ್ ಸೇತುವೆಗಳ ನಿರ್ಮಾಣ, ರಸ್ತೆ ದಾಟಲು ಅಂಡರ್ ಪಾಸ್‌ಗಳು, ಹಸಿರು ದಿಲ್ಲಿ ಸ್ವಚ್ಛ ದಿಲ್ಲಿ ಸ್ಲೋಗನ್ ಅಡಿಯಲ್ಲಿ ಸುಲಭ ಶೌಚಾಲಯಗಳನ್ನು ಸ್ಥಾಪಿಸುವುದು, ಹಸಿರು ಉದ್ಯಾನವನಗಳನ್ನು ಬೆಳೆಸುವ, ರಸ್ತೆ ಅಗಲೀಕರಣದ ಹಲವಾರು ಕಾರ್ಯಗಳು ಏಕಕಾಲದಲ್ಲಿ ನಗರದ ಉದ್ದಗಲಕ್ಕೂ ಹಲವು ಹಂತಗಳಲ್ಲಿ ಹಲವು ಪ್ರದೇಶಗಳಲ್ಲಿ ನಡೆಯುತ್ತಿದ್ದವು. ಸದಾ ವಾಹನಗಳ ಓಡಾಟವಿರುವ ಮಹಾನಗರದಲ್ಲಿ ನಿರ್ಮಾಣ ಕಾರ್ಯವೇನು ಸುಲಭದ್ದಲ್ಲ. ಈಗ ನೋಡಿದರೆ ಎಷ್ಟು ಸಕ್ಷಮವಾಗಿ ಹೇಗೆಲ್ಲ ಇಷ್ಟು ಮೆಟ್ರೋ ಕಾರ್ಯಗಳು ನಡೆದವು ಎಂದು ಅಚ್ಚರಿಯಾಗುತ್ತದೆ.

ಔಟರ್ ರಿಂಗ್ ರೋಡಿನ ಹೌಜಕಾಸ, ಪಂಚಶೀಲ್, ಮಾಲವೀಯ ನಗರ, ಚಿರಾಗ್ ದಿಲ್ಲಿ, ನೆಹರೂ ಪ್ಲೇಸ್ ಸೇತುವೆಗಳು ನಿರ್ಮಾಣವಾಗುತ್ತಿದ್ದಾಗ ನನ್ನ ನಿತ್ಯದ ಓಡಾಟದ ಹಾದಿ ಅದೇ ಆಗಿತ್ತು. ಇತ್ತ ಏಮ್ಸ್, ಸಫ್ದರ್ಜಂಗ್ ಆಸ್ಪತ್ರೆಯ ವರ್ತುಲಾಕಾರದ ಫ್ಲಸ್ ಮೈನಸ್ ಸೇತುವೆ, ಭಿಕಾಜಿ ಕಾಮಾ ಪ್ಲೇಸ್, ಯೂಸೂಫ್ ಸರಾಯ್, ಗ್ರೀನ ಪಾರ್ಕ ಪ್ರದೇಶಗಳಲ್ಲಿ ಒಂದಿಲ್ಲಾ ಒಂದು ಕಾರ್ಯ ನಡೆಯುತ್ತಲೇ ಇದ್ದಾಗ ಕೈಲಾಶ್ ಕಾಲೋನಿಯಲ್ಲಿ ನನ್ನ ಕಚೇರಿಯಿದ್ದು ನಿತ್ಯದ ಓಡಾಟ ಆ ಮಾರ್ಗವಾಗಿಯೇ ಇತ್ತು.

ಒಟ್ಟಿನಲ್ಲಿ ದೆಹಲಿಯಲ್ಲಿ ಎತ್ತ ಹೋದರೂ ನಿತ್ಯವೂ ಅಸಾಧ್ಯವಾದ ಟ್ರಾಫಿಕ್, ಧೂಳು, ದುಮ್ಮಾನಗಳನ್ನು ಕುಡಿಯುತ್ತ ಆಫೀಸಿಗೆ ಓಡಾಡಿದ ದಿನಗಳು ನೆನಪಾಗುತ್ತವೆ. ಜೊತೆಗೆ ಸದಾ ನಿರ್ಮಾಣ ಕಾರ್ಯದಿಂದುಂಟಾಗುತ್ತಿದ್ದ ಅನಾನುಕೂಲವೆಂದರೆ ಹಾವಿನಂತೆ ತೆವಳುವ ಸಾರಿಗೆ. ಇಂದು ನಗರದ ತುಂಬೆಲ್ಲ ಸೇತುವೆ, ಮೆಟ್ರೋ ರೈಲು, ಅಗಲವಾದ ರಸ್ತೆಗಳಿದ್ದರೂ ಒಂದು ಜೋರು ಮಳೆಯಾದರೂ ಸಾಕು ನೀರೆಲ್ಲ ಕಟ್ಟಿಹೋಗಿ ದೊಡ್ಡ ಕೆರೆಯಾಗಿ ವಾಹನಗಳು ಕೆಟ್ಟುಹೋಗಿ ಟ್ರಾಫಿಕ್ ನಿಂತುಹೋಗಿ ಜನಜೀವನವೆಲ್ಲ ಅಸ್ತವ್ಯಸ್ತವಾಗುವ ಹಿಂಸೆ ಇವತ್ತಿಗೂ ಇದೆ.

ಒಮ್ಮೆ ಗ್ರೇಟರ್ ಕೈಲಾಶ್ ಪಾರ್ಟ್ ಎರಡರ ತಿರುವಿನಲ್ಲಿ ರೆಡ್ ಲೈನ್ ಬಸ್ಸು ಹತ್ತಲಾಗದೇ ಬಸ್ಸಿನಿಂದ ಬಿದ್ದು ಮೊಣಕಾಲು ಕೆತ್ತಿಸಿಕೊಂಡಿದ್ದೂ ಇದೆ. ಕಿಕ್ಕಿರಿದು ತುಂಬಿದ ಮಿನಿ ಬಸ್ಸಿನಿಂದ ಹೊರಬರಲಾರದೇ? 'ಬೈಯ್ಯಾ ಮುಝೆ ಉತಾರೋ'. 'ನನ್ನನ್ನು ಇಳಸಪ್ಪಾ' ಎಂದು ಕೂಗಿದರೂ ಆತ ಕ್ಯಾರೇ ಅನ್ನದೇ ನಾನು ಗಲಾಟೆ ಮಾಡಿ ಮಿನಿ ಬಸ್ಸಿನ ಮಿನಿ ಕಂಡಕ್ಟರ್ ನನ್ನ ವ್ಯಾನಿಟಿ ಬಾಗನ್ನು ಅಕ್ಷರಶಃ ರಸ್ತೆಯ ಪಕ್ಕಕ್ಕೆ ಬಿಸಾಡಿ, ನೂಕುನುಗ್ಗಲಿನ ಸಂದಣಿಯಲ್ಲಿ ಸಿಕ್ಕಿಕೊಂಡಿದ್ದ ನನ್ನನ್ನೂ ಎಳೆದು ಹೊರಗೆ

ಬಿಸಾಕುವವನಂತೆ ಯಥಾವತ್ ಕೆಳಗೆ ಎಳೆದು ಹಾಕಿದ್ದ. ಅಬ್ಬಾ, ಇಳಿದೆನಲ್ಲ ಅಂತ ಉಸಿರು ಬಿಟ್ಟಿದ್ದೆ. ರಸ್ತೆಯಲ್ಲಿ ಬಿದ್ದ ನನ್ನ ಬ್ಯಾಗನ್ನು ಯಾರೋ ಎತ್ತಿಕೊಟ್ಟಿದ್ದರು. ಅಂತೂ ಇಂತೂ ಹೇಗೋ ಮನೆ ತಲುಪಿದ್ದೆ. ಇಂಥ ಅವಾಂತರಗಳನ್ನೆಲ್ಲ ನೆನೆಪಿಸಿಕೊಂಡರೆ ಇಂದಿನ ದಿಲ್ಲಿಯ ಜೀವನ ನಿವೃತ್ತ ಜೀವನದಂತೆ ಆರಾಮದಾಯಕವಾಗಿದೆ ಎನ್ನಬಹುದು. ದೆಹಲಿ ಮತ್ತು ದೆಹಲಿಯ ಹೊರವಲಯದವರೆಗೂ ಚಾಚಿಕೊಂಡ ಮೆಟ್ರೊ ಸಾರಿಗೆ ನಮ್ಮ ಬದುಕನ್ನು ನೆಮ್ಮದಿಯಾಗಿಸಿದೆ ಎನ್ನಲಡ್ಡಿಯಿಲ್ಲ.

ವಾಯುಮಾಲಿನ್ಯದ ಅನುಪಾತ ಮಹಾನಗರದ ನರನಾಡಿಗಳಲ್ಲಿ ಹರಿದು ಪುಪ್ಪುಸಗಳನ್ನು ವಿಷವಾಗಿಸುತ್ತಿದ್ದಾಗ ದೆಹಲಿಯಲ್ಲಿ ವಿಶ್ವದ ಅತಿದೊಡ್ಡ ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (ಸಿಎನ್‌ಜಿ) ಆಧಾರಿತ ಬಸ್‌ಗಳನ್ನು ಕಡ್ಡಾಯಗೊಳಿಸಿದ ಹೆಗ್ಗಳಿಕೆ ಸಹ ಶೀಲಾ ಅವರಿಗೆ ಸಲ್ಲುತ್ತದೆ. ಆ ತನಕ ದೆಹಲಿಯಂಥ ರಾಜಧಾನಿಯಲ್ಲಿ ಹವಾ ನಿಯಂತ್ರಿತ ಬಸ್ಸುಗಳೇ ಇದ್ದಿಲ್ಲ. ಹಿರಿಯ ನಾಗರಿಕರು ಮತ್ತು ಮಕ್ಕಳಿಗೆ ಅನುಕೂಲವಿರುವ ಲೋ ಫ್ಲೋರ್ ಸಿಎನ್‌ಜಿ ಬಸ್ಸುಗಳು ದೆಹಲಿಯ ಬಿರುಬಿಸಿಲಿನಿಂದ ನೆತ್ತಿಯನ್ನು ತಂಪುಗೊಳಿಸಿದವು. ಬೆಂಗಳೂರಿಗೆ ಹೋಲಿಸಿದರೆ ದಿಲ್ಲಿಯಲ್ಲಿ ಸಾರಿಗೆ ದರವೂ ಕಡಿಮೆ ಅನ್ನಬಹುದು.

ಇಂದು ದೆಹಲಿಯ ಏಮ್ಸ್ ರಿಂಗರೋಡಿನಿಂದ ನೇರವಾಗಿ ಮಯೂರ ವಿಹಾರ ಮತ್ತು ನೊಯಿಡಾಗಳನ್ನು ತಲುಪಲು ಬಾರಾಪುಲ್ಲಾ ಸೇತುವೆ ಇದೆ. ಬರಾಪುಲ್ಲಾ ಸೇರಿದಂತೆ ರಸ್ತೆ ಮೂಲಸೌಕರ್ಯ, ಗಾಂಧಿ ನಗರದಿಂದ ನೋಯ್ಡಾ ನಡುವಿನ ಸಿಗ್ನಲ್ ಮುಕ್ತ ಕಾರಿಡಾರ್, ಏಮ್ಸ್ ಫ್ಲೈಓವರ್–ಎಲಿವೇಟೆಡ್ ರೋಡ್ ನೆಟ್ವರ್ಕ್, ಐಟಿಓ ಫ್ಲೈಓವರ್, ರಾಜ್ಘಾಟ್ ರಿಂಗ್ ರೋಡ್ ಮತ್ತು ಟ್ರಾನ್ಸ್ ಯಮುನಾ ಪ್ರದೇಶದ ಎಲ್ಲಾ ಫ್ಲೈಓವರ್, ಮೇಲು ರಸ್ತೆ ಅಭಿವೃದ್ಧಿ ಶೀಲಾ ಅವರ ಸಾಧನೆಯಾಗಿದೆ.

***ರೇಣುಕಾ ನಿಡಗುಂದಿ***

*(ಕೃಪೆ : ಡೆಕ್ಕನ್ ನ್ಯೂಸ್)*

# ಚಂದ್ರಯಾನ -2 ಯಶಸ್ವಿ ಉಡಾವಣೆಯನ್ನು ಕಂಡು ಸಂಭ್ರಮಿಸಿದ ವಿದ್ಯಾರ್ಥಿಗಳು



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ದಿನಾಂಕ 22-07-2019, ಸೋಮವಾರದಂದು ಶತಕೋಟಿ ಭಾರತೀಯರ ಕನಸಿನ ಚಂದ್ರಯಾನ -2 ಯಶಸ್ವಿ ಉಡಾವಣೆಯನ್ನು ಸಂಸ್ಥೆಯ 9ನೇ ತರಗತಿಯಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾರ್ಥಿಗಳು ಇಸ್ರೋ ವಿಜ್ಞಾನಿಗಳ ಸಾಧನೆಯನ್ನು ಕಂಡು ಸಂಭ್ರಮಿಸಿದರು ಹಾಗೂ ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತವಿಟ್ಟ ದಿಟ್ಟ ಹೆಜ್ಜೆಯನ್ನು ಕಂಡು ಬೆರಗಾದರು.

ಚಂದ್ರಯಾನ ವೀಕ್ಷಣೆಯ ಬಳಿಕ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸಿದ 9ನೇ ತರಗತಿಯ ವಿದ್ಯಾರ್ಥಿ ಅಭಿಷೇಕ ಉಬಾಳೆಯು "ಸಹಪಾಠಿಗಳೊಂದಿಗೆ ಮತ್ತು ಶಿಕ್ಷಕರೊಂದಿಗೆ ಚಂದ್ರಯಾನ ವೀಕ್ಷಣೆಯ ಅನುಭವ ನನಗೆ ಬಹಳ ಸಂತೋಷವನ್ನು ನೀಡಿತು. ಚಂದ್ರಯಾನದ ಹಿನ್ನೆಲೆ, ಉದ್ದೇಶವನ್ನು ಶಿಕ್ಷಕರು ತಿಳಿಸಿದಾಗ ಬಹಳ ಹೆಮ್ಮೆಯೆನಿಸಿತು. ನನ್ನ ಮನಸ್ಸು ಮೊದಲೇ ವಿಜ್ಞಾನದ ಕಡೆ ಮುಖ ಮಾಡಿತ್ತು. ಇದೀಗ ಮನದೊಳಗೆ ಆ ಕುರಿತಾದ ಸ್ಫೂರ್ತಿಯು ಇಮ್ಮಡಿಯಾಗಿದೆ. ಇಂತಹ ಸಂದರ್ಭವನ್ನು ಒದಗಿಸಿದಂತಹ ನಮ್ಮ ಸಂಸ್ಥೆಯ ಆಡಳಿತ ಮಂಡಳಿಗೆ, ಪ್ರಾಂಶುಪಾಲರಿಗೆ ಹಾಗೂ ಶಿಕ್ಷಕರಿಗೆ ಅನಂತ ಧನ್ಯವಾದಗಳು" ಎಂದನು.

ಸಂಸ್ಥೆಯ ವಿಜ್ಞಾನ ಶಿಕ್ಷಕರಾದ ಎಚ್.ಎಸ್. ತೇಲಿ ಅವರು ಮಾತನಾಡಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವ ಸಲುವಾಗಿ ಈ ಚಂದ್ರಯಾನ ವೀಕ್ಷಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ನಮ್ಮ ದೇಶವು ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಗೈಯುತ್ತಿರುವ ಸಾಧನೆಯ ಜೊತೆಗೆ ವಿಜ್ಞಾನ ಜಗತ್ತಿನ ವಿಸ್ಮಯಗಳು ಮಕ್ಕಳ ಬೌದ್ಧಿಕ ವಿಕಾಸಕ್ಕೆ ನೆರವಾಗಲಿ ಎಂಬುದು ಇದರ ಉದ್ದೇಶವಾಗಿದೆ" ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್, ಶಿಕ್ಷಕರಾದ ವಿಜಯಕುಮಾರಿ ಎನ್., ಸೀಮಾ, ಸೌಮ್ಯ, ಬಲಬೀರ್ ಸಿಂಗ್, ಮಾಲಾ ಗೋಪಾಲ್, ರಾಧೇಶ್ಯಾಮ್ ಪಾಂಡೆ ಉಪಸ್ಥಿತರಿದ್ದರು.

***ಅರವಿಂದ ಬಿಜ್ಜೆ***

# ಗುರುಗಾಂವ್ ಕನ್ನಡ ಸಂಘದಲ್ಲಿ ಸತ್ಯನಾರಾಯಣ ಪೂಜೆ




ಗುರುಗಾಂವ್ ಕನ್ನಡ ಸಂಘದಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆಯನ್ನು ತುಂಬಾ ಶ್ರದ್ಧೆ ಮತ್ತು ಭಕ್ತಿಯಿಂದ ಸುಮಾರು 450ಕ್ಕೂ ಹೆಚ್ಚು ಕನ್ನಡಿಗರು ಸೇರಿ ಕುಟುಂಬ ಸಮೇತರಾಗಿ ಬಂದು ಪೂಜೆಯನ್ನು ದಿನಾಂಕ 28.07.2019ರಂದು ಆಚರಿಸಿದರು.

ವಿಶೇಷವಾಗಿ ಎಲ್ಲ ದಾನಿ ಮತ್ತು ಮಹಾದಾನಿಗಳಿಗೆ ಹಾಗೂ ದೆಹಲಿ, ಎನ್.ಸಿ.ಅರ್ ಹಾಗೂ ಭಿವಾಡಿಯಿಂದ ಪೂಜೆಗೆ ಬಂದ ಎಲ್ಲರಿಗೂ ಹಾಗೂ ಈ ಕಾರ್ಯಕ್ರಮಕ್ಕೆ ಎಲೆ ಮರೆ ಕಾಯಿಯಂತೆ ನಿಸ್ವಾರ್ಥ ಸೇವೆ ಸಲ್ಲಿಸಿದ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕೆಲಸ ಮಾಡಿದ ಹಲವಾರು ನಮ್ಮ ಹಿರಿಯರು, ಅಣ್ಣ ತಮ್ಮಂದಿರರು, ಅಕ್ಕ ತಂಗಿಂದಿರು ಮತ್ತು ಮಕ್ಕಳು ಶ್ರಮಿಸಿದ್ದಾರೆ, ಅವರಿಗೂ ಹಾಗೂ ವಿಶೇಷವಾಗಿ ರುಚಿ ರುಚಿಯಾಗಿ ತಾಯ್ನಾಡಿನ ಶೈಲಿಯಲ್ಲಿ ಆಡುಗೆ ತಯಾರಿಸಿದ ಸಂತೋಷ್ ಕೆ.ಕೆ , ಕುಮಾರ ಸಿ.ಮತ್ತು ತಂಡಕ್ಕೆ ಧನ್ಯವಾದಗಳು ಸಲ್ಲಬೇಕು.

ಎಲ್ಲರೂ ತನು-ಮನ-ಧನ, ಸಮಯ ಹಾಗೂ ಶ್ರದ್ಧಾ ಭಕ್ತಿಯಿಂದ ಪಾಲ್ಗೊಂಡು ಸ್ವಾಮಿಯ ಕೃಪೆಗೆ ಪಾತ್ರರಾಗಿ, ಭಕ್ತಿ ಎತ್ತಿ ಹಿಡಿಯುವ ಈ ಆಚರಣೆ ಕನ್ನಡಿಗರನ್ನು ಅಭಿಮಾನಗೊಳ್ಳುವಂತೆ ಮಾಡುತ್ತದೆ.

ಕನ್ನಡಿಗರಲ್ಲಿನ ಸಹೋದರತೆ, ಮಾನವೀಯತೆ ಮತ್ತು ಸಹಾಯಹಸ್ತ ಮನಸ್ಸುಗಳು ಭಾರತೀಯ ಸಂಸ್ಕೃತಿ ಮತ್ತು ಮಾನವತಾವಾದದಲ್ಲಿ ತನ್ನದೇ ಆದ ವರ್ಚಸ್ಸು ಮತ್ತು ಪ್ರಭಾವವನ್ನು ಬೀರಿದೆ.

ಕೇವಲ ಭಾರತದಲ್ಲಿ ಮಾತ್ರವಲ್ಲದೇ ಔದ್ಯೋಗಿಕ ನೆಲೆಯಲ್ಲಿ ಪ್ರಪಂಚದ ನಾನಾ ಭಾಗಗಳಲ್ಲಿ ನೆಲೆಸಿರುವ ಜನರು ಇಲ್ಲಿಯ ಪರಂಪರೆ, ಸಹೋದರತೆ ಮತ್ತು ಮಾನವತಾವಾದವನ್ನು ಹರಡುತ್ತಾ ಕರ್ನಾಟಕದ ಶ್ರೇಯಸ್ಸಿಗೆ ಕಾರಣಕರ್ತರಾಗಿದ್ದಾರೆ.

ವಿಶೇಷವಾಗಿ ಗುರುಗಾಂವ್ ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದ್ದು ಎಲ್ಲರ ಗಮನ ಸೆಳೆಯಿತು. ಆಹಾರ ಮತ್ತು ನೀರಿನ ಮಿತ ಬಳಕೆ, ಸ್ವಚ್ಛತೆ ಮತ್ತು ಶಬ್ಧಮಾಲಿನ್ಯ ನಿಯಂತ್ರಣ ಕುರಿತು ತಿಳುವಳಿಕೆ ನೀಡಿದ ಮಕ್ಕಳಿಗೂ, ಸ್ವಯಂ ಸೇವಕರಾಗಿ ಸಹಕರಿಸಿದ ಪ್ರವೀಣ್ ಗೌಡ, ಬೆಂಗಳೂರಿನಲ್ಲಿ ಇದ್ದರೂ ಆಹ್ವಾನ ಪತ್ರಿಕೆ ಮುದ್ರಿಸಿದ ಸಂಗ್ಲೆಕರ್ ಹಾಗೂ ಪೂಜೆಗೆ ಆಗಮಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶೀಮತಿ ಜಾನಕಿ ಮತ್ತು ಇವರನ್ನು ಪೂಜೆಗೆ ಕರೆದುಕೊಂಡು ಬಂದ ಸಿ.ಎಂ. ನಾಗರಾಜ ರವರಿಗೂ ಹಾಗೂ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೂ ಗುರುಗಾಂವ್ ಕನ್ನಡ ಸಂಘದ ಧನ್ಯವಾದಗಳು ಸಲ್ಲುತ್ತದೆ.

**ಕೃಷ್ಣಪ್ಪ ಎಂ**



# ನೃತ್ಯ ಕಲಾವಿದೆ ಕೋಮಲಾ ವರದನ್ ಇನ್ನಿಲ್ಲ



ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯೆ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪ್ರಸಿದ್ಧ ಭರತನಾಟ್ಯ ಕಲಾವಿದೆ ಶ್ರೀಮತಿ ಕೋಮಲಾ ವರದನ್ ದಿನಾಂಕ 27.07.2019ರಂದು ನಿಧನರಾಗಿದ್ದಾರೆ. ಶ್ರೀಮತಿ ಕೋಮಲಾ ವರದನ್ ಅವರು ದೆಹಲಿಯಲ್ಲಿ ಬಹಳ ವರ್ಷದಿಂದ ಭರತನಾಟ್ಯ ಶಾಲೆಯನ್ನು ನಡೆಸುತ್ತಿದ್ದು ಈ ಕಲೆಗೆ ತಮ್ಮದೇ ಆದ ವಿಶಿಷ್ಟ ರೀತಿಯ ಕೊಡುಗೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಸಂಘದಲ್ಲಿಯೂ ಕೂಡಾ ಅವರು ಹಲವಾರು ಬಾರಿ ಪ್ರದರ್ಶನವನ್ನು ನೀಡಿದ್ದರು.


ಕೋಮಲಾ ವರದನ್ ಅವರಿಗೆ ದೆಹಲಿ ಕರ್ನಾಟಕ ಸಂಘ ಶ್ರದ್ಧಾಂಜಲಿ ಸಲ್ಲಿಸುತ್ತದೆ.

# ಶೀಲಾ ದೀಕ್ಷಿತ್, ಕೋಮಲಾ ವರದನ್ ಮತ್ತು ವಿ.ಜಿ. ಸಿದ್ಧಾರ್ಥ್ ಅವರಿಗೆ ಶ್ರದ್ಧಾಂಜಲಿ




ಅಗಲಿದ ದೆಹಲಿಯ ಮಾಜಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್, ಖ್ಯಾತ ನೃತ್ಯ ಕಲಾವಿದೆ ಮತ್ತು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಕೋಮಲಾ ವರದನ್ ಮತ್ತು ಉದ್ಯಮಿ ವಿ.ಜಿ. ಸಿದ್ಧಾರ್ಥ ಅವರಿಗೆ ದೆಹಲಿ ಕರ್ನಾಟಕ ಸಂಘವು ದಿನಾಂಕ 02.08.2019ರಂದು ಶ್ರದ್ಧಾಂಜಲಿ ಸಲ್ಲಿಸಿತ್ತು.

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾರ್ಯದ ವೇಳೆ ದೆಹಲಿ ಸರ್ಕಾರದಿಂದ 25ಲಕ್ಷ ರೂಪಾಯಿ ಅನುದಾನವನ್ನು ನೀಡಿ ಔದಾರ್ಯವನ್ನು ತೋರಿದ ಶೀಲಾ ದೀಕ್ಷಿತ್ ಅವರ ನೆರವನ್ನು ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸ್ಮರಿಸಿದರು. ಅಂತೆಯೇ ಸಂಘದಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಾ ಸುದೀರ್ಘ ಒಡನಾಟವನ್ನು ಹೊಂದಿದ್ದ ಕಲಾವಿದೆ ಕೋಮಲಾ ವರದನ್ ಮತ್ತು ಸಾವಿರಾರು ಜನರಿಗೆ ಉದ್ಯೋಗಾವಕಾಶ ನೀಡಿ ಆಸರೆಯಾಗಿದ್ದ ಕರ್ನಾಟಕದ ಹೆಮ್ಮೆಯ ಉದ್ಯಮಿ ಕೆಫೆ ಕಾಫೀ ಡೇ ಉದ್ಯಮಿ ವಿ.ಜಿ. ಸಿದ್ಧಾರ್ಥ ಅವರಿಗೆ ನುಡಿನಮನ ಸಲ್ಲಿಸಲಾಯಿತು.






## ಓದುಗರ ಸ್ಪಂದನ

ಮಾನ್ಯರೇ,

ಜುಲಾಯಿ ತಿಂಗಳ ಅಭಿಮತವನ್ನು ಕಾರ್ನಾಡರಿಗೆ ಅಕ್ಷರ ನಮನ ಸಲ್ಲಿಸುವ ಮೂಲಕ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಸಂಘದಲ್ಲಿ 1999ರಲ್ಲಿ ನಡೆದ ಕಾರ್ಯಕ್ರಮ ವನ್ನು ನೆನಪಿಸಿಕೊಟ್ಟದ್ದು ಬಹಳ ಖುಷಿಕೊಟ್ಟಿತು. ಬಹುಶಃ ಕನ್ನಡದ ಯಾವ ಪತ್ರಿಕೆಯೂ ಹೀಗೆ ಪೂರ್ತಿಯಾಗಿ ಕಾರ್ನಾಡರಿಗೆ ಅರ್ಪಿಸಿಕೊಂಡಂತಿಲ್ಲ. ಇದನ್ನು ಸಾಧ್ಯಮಾಡಿದ ಸಂಪಾದಕರು ಮತ್ತು ಅಭಿಮತ ಬಳಗಕ್ಕೆ ಅಭಿನಂದನೆಗಳು.

*ಡಾ. ಪುರುಷೋತ್ತಮ ಬಿಳಿಮಲೆ*

# ಸಂಸದರಿಗೆ ಆಹ್ವಾನ ನೀಡಲು ಭೇಟಿ ಮಾಡಿದ ಸಂದರ್ಭ



ರೈಲ್ವೇ ಖಾತೆ ರಾಜ್ಯ ಸಚಿವ ಶ್ರೀ ಸುರೇಶ್ ಅಂಗಡಿ



ಸಂಸದ ಶ್ರೀ ಜಿ.ಎಂ. ಸಿದ್ದೇಶ್ವರ್



ಸಂಸದೆ ಶೋಭಾ ಕರಂದ್ಲಾಜೆ



ಸಂಸದ ಶ್ರೀ ನಳಿನ್ ಕುಮಾರ್ ಕಟೀಲ್



ಸಂಸದ ಶ್ರೀ ಶ್ರೀನಿವಾಸ ಪ್ರಸಾದ್




ಸಂಸದ ಶ್ರೀ ನಾರಾಯಣ ಸ್ವಾಮಿ



ಸಂಸದ ಶ್ರೀ ಬಿ.ಎನ್. ಬಚ್ಚೇಗೌಡ



ಸಂಸದ ಶ್ರೀ ಬಿ.ವೈ. ರಾಘವೇಂದ್ರ



ಸಂಸದ ಶ್ರೀ ಪ್ರತಾಪ್ ಸಿಂಹ



ಸಂಸದ ಶ್ರೀ ತೇಜಸ್ವಿ ಸೂರ್ಯ



ರಾಜ್ಯಸಭಾ ಸದಸ್ಯ ಶ್ರೀ ಆಸ್ಕರ್ ಫರ್ನಾಂಡೀಸ್



ರಾಜ್ಯಸಭಾ ಸದಸ್ಯ ಶ್ರೀ ಕೆ.ಸಿ. ರಾಮಮೂರ್ತಿ



ರಾಜ್ಯಸಭಾ ಸದಸ್ಯ ಡಾ. ಸೈಯದ್ ನಾಸೀರ್ ಹುಸೇನ್



ರಾಜ್ಯಸಭಾ ಸದಸ್ಯ ಡಾ. ಎಲ್. ಹನುಮಂತಯ್ಯ



ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ : 011–26109615 /
26104818

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-




ಕಲಾವಿದ ಭೀಮಸೇನ್ ಭಜಂತ್ರಿ ಅವರನ್ನು ದಿನಾಂಕ 14.07.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಸನ್ಮಾನ್ಯ ಪ್ರಹ್ಲಾದ್ ಜೋಷಿ ಅವರು ಅಭಿನಂದಿಸಿದರು.

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Delhi Karnataka Sangha Abhimata
Aug-2019, Vol. No.29, Issue No.11, Price Rs.1/-
RNI Regn. No. 53405/91, DL-SW-1/4016/19-21
Date of Publication : Aug 8th / 9th, Posting Date :10th / 11th, Total Pages-24, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

